# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ

ದಿನಾಂಕ 23.12.2016 ರಂದು ವಿಜ್ಞಾನ ಭವನದಲ್ಲಿ ಜರುಗಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನೂತನ ಕಾರ್ಯಕಾರಿ ಸಮಿತಿ ಸದಸ್ಯರ **ಮೊದಲನೇ ಸಭೆಯ** ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು** :

1. ಶ್ರೀ ಎಂ.ಟಿ. ಶಂಕರಪ್ಪ, ಚಿತ್ರದುರ್ಗ.
2. ಶ್ರೀ ಬಿ.ಎನ್. ಶ್ರೀನಾಥ್, ಬೆಂಗಳೂರು.
3. ಶ್ರೀ ಈ. ಬಸವರಾಜು, ಬೆಂಗಳೂರು.
4. ಶ್ರೀ ಹುಲಿಕಲ್ ನಟರಾಜ್, ಬೆಂಗಳೂರು ಗ್ರಾ.
5. ಶ್ರೀ ಕೌಶಿಕ್ ಪಿ.ಎಸ್., ಬೆಂಗಳೂರು.
6. ಶ್ರೀ ಉದಯರತ್ನಕುಮಾರ್ ಕೆ., ಬೆಂಗಳೂರು.
7. ಶ್ರೀಮತಿ ಶ್ರೀಮತಿ ಹರಿಪ್ರಸಾದ್, ಮೈಸೂರು
8. ಶ್ರೀ ಸಿ. ಕೃಷ್ಣೇಗೌಡ, ಮೈಸೂರು
9. ಶ್ರೀ ಗುರುನಂಜಯ್ಯ ಎಸ್.ಎಂ., ಮೈಸೂರು
10. ಶ್ರೀ ಎನ್.ಆರ್. ಮಂಜುನಾಥ, ಮೈಸೂರು.
11. ಶ್ರೀ ರಾಮಚಂದ್ರ, ಮಂಡ್ಯ.
12. ಶ್ರೀ ನರೇಂದ್ರ ಆಡನೂರು, ಚಿಕ್ಕಮಗಳೂರು.
13. ಶ್ರೀ ಗಿರೀಶ್ ಬಿ.ಕಡ್ಲೇವಾಡ, ಕಲ್ಬುರ್ಗಿ.
14. ಶ್ರೀ ದಾನಿ ಬಾಬುರಾವ್, ಬೀದರ.
15. ಡಾ. ಕುಂಟೆಪ್ಪ ಗೌರೀಪುರ, ರಾಯಚೂರು.
16. ಶ್ರೀ ಕೊಟ್ರುಸ್ವಾಮಿ ಎಸ್.ಎಂ., ಬಳ್ಳಾರಿ.
17. ಶ್ರೀ ಜಗನ್ನಾಥ್ ಕೆ. ಹಲಮಡಗಿ, ಬೀದರ.
18. ಶ್ರೀ ಸೂರ್ಯಪ್ರಕಾಶ ಘನಾತೆ, ಯಾದಗಿರಿ.
19. ಶ್ರೀ ಬಿ. ದೊಡ್ಡಬಸಪ್ಪ, ಬಾಗಲಕೋಟೆ.
20. ಶ್ರೀ ಹೆಚ್.ಜಿ. ಹುದ್ದಾರ್, ಬಾಗಲಕೋಟೆ.
21. ಶ್ರೀ ಆರ್.ಎಸ್. ಪಾಟೀಲ, ಹಾವೇರಿ
22. ಶ್ರೀ ಆರ್. ಎಸ್.ಎಲಿ, ವಿಜಯಪುರ.
23. ಶ್ರೀ ಎಸ್.ವಿ. ಸಂಕನೂರ, ಗದಗ.
24. ಶ್ರೀ ಶಂಕರ ತಮ್ಮಣ್ಣಾ ನಾಯಿಕ, ಬೆಳಗಾವಿ.

1. ನಿಕಟಪೂರ್ವ ಗೌರವ ಕಾರ್ಯದರ್ಶಿ, ಡಾ॥ ವಸುಂಧರಾ ಭೂಪತಿಯವರು ನೂತನವಾಗಿ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದ ಸದಸ್ಯರೆಲ್ಲರನ್ನೂ ಸ್ವಾಗತಿಸಿ ಅಭಿನಂದಿಸಿದರು.

2. ಸಭೆಯನ್ನು ಆರಂಭಿಸುವ ಮೊದಲು ಇತ್ತೀಚೆಗೆ ನಿಧನರಾದ ವಿಜ್ಞಾನ ಪರಿಷತ್ತಿನ ಸ್ಥಾಪಕ ಸದಸ್ಯರಲ್ಲೊಬ್ಬರಾದ ಶ್ರೀ ಅಡ್ಯನಡ್ಕ ಕೃಷ್ಣಭಟ್ ಹಾಗೂ ಸದಸ್ಯರಾದ ಡಾ॥ ಅಶೋಕ್ ಪೈ, ಡಾ॥ ಎಸ್.ಎಸ್. ನರಸಂಗಿ, ಶ್ರೀ ನಾಗರಾಜ್, ದಾವಣಗೆರೆಯ ಶ್ರೀ ಕದರ ಮಂಡಲಗಿ ಬಸವರಾಜ್ ಇವರುಗಳನ್ನು ಸ್ಮರಿಸುತ್ತಾ, ಎರಡು ನಿಮಿಷಗಳ ಮೌನಾಚರಣೆ ಮಾಡಲಾಯಿತು.

3. ನಂತರ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ, ಶ್ರೀ ಈ. ಬಸವರಾಜು, ಶ್ರೀ ಆರ್.ಎಸ್. ಪಾಟೀಲ, ಶ್ರೀಮತಿ ಶ್ರೀಮತಿ ಹರಿಪ್ರಸಾದ್ ಇವರುಗಳು ನಿಧನರಾಗಿರುವ ಸದಸ್ಯರ ಕುರಿತು ಅದರಲ್ಲೂ ವಿಶೇಷವಾಗಿ ಬಾಲವಿಜ್ಞಾನ ಸಂಪಾದಕ ಮಂಡಳಿಯ ಸದಸ್ಯರಾಗಿ ಅತ್ಯುತ್ತಮ ಗುಣಮಟ್ಟದ ಬಾಲವಿಜ್ಞಾನ ಪತ್ರಿಕೆ ಹೊರತರುವಲ್ಲಿ ಮಹತ್ವದ ಪಾತ್ರ ವಹಿಸಿದ ಶ್ರೀ ಅಡ್ಯನಡ್ಕ ಕೃಷ್ಣಭಟ್‌ರ ಸೇವೆಯನ್ನು ಸ್ಮರಿಸಿಕೊಂಡು ಅವರ ಆತ್ಮಕ್ಕೆ ಶಾಂತಿ ಕೋರಿದರು.

4. ನೂತನ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ ಸಭೆಗೆ ಸ್ವ–ಪರಿಚಯ ಮಾಡಿಕೊಂಡ ನಂತರ ಡಾ॥ ವಸುಂಧರಾ ಭೂಪತಿಯವರು, ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ, ವಿಜ್ಞಾನ ಪರಿಷತ್ತಿನಲ್ಲಿ ಈ ಹಿಂದೆ ನಡೆದುಕೊಂಡು ಬಂದ ಪದ್ಧತಿಯಂತೆ ಜರುಗಬೇಕೆಂಬ ಮಾತಿನೊಂದಿಗೆ ನಡವಳಿಗಳನ್ನು ಆರಂಭಿಸಿದರು.

5. ಒಬ್ಬೊಬ್ಬರನ್ನಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ವಿಧಾನಕ್ಕೆ ತಮ್ಮ ವಿರೋಧವಿದೆ, ಮಾಡುವುದೇ ಆದಲ್ಲಿ ಒಟ್ಟಾಗಿ ಎಲ್ಲ ಪದಾಧಿಕಾರಿಗಳ ಆಯ್ಕೆಯನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆಗೊಳಿಸಿದ ವಿಧಾನವನ್ನು ಅನುಸರಿಸಬೇಕು ಎಂದು ಶ್ರೀ ಈ. ಬಸವರಾಜು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ಆದರೆ, ಡಾ॥ ವಸುಂಧರಾ ಭೂಪತಿಯವರು ಹಿಂದಿನ ಪದ್ಧತಿಯಂತೆ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಬೇಕು, ಈಗ ಆ ಪದ್ಧತಿಯನ್ನು ಬದಲಾವಣೆ ಮಾಡುವುದು ಬೇಡ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಎಲ್ಲ ಸದಸ್ಯರು ಸಮ್ಮತಿ ಸೂಚಿಸಿದರು. ತದನಂತರ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿದರು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿದ ಶ್ರೀ ಈ ಬಸವರಾಜುರವರು ಸಭಾತ್ಯಾಗ ಮಾಡಿ ಕೆಲ ಸಮಯದ ನಂತರ ಸಭೆಗೆ ಹಾಜರಾದರು.

6. ಪರಿಷತ್ತಿನ ಪದಾಧಿಕಾರಿಗಳ ಆಯ್ಕೆಯ ಅಂಗವಾಗಿ, ಮೊಟ್ಟಮೊದಲನೆಯದಾಗಿ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕಾಗಿ ಶ್ರೀ ಎಸ್.ವಿ. ಸಂಕನೂರ ರವರ ಹೆಸರನ್ನು ಶ್ರೀ ಹುಲಿಕಲ್ ನಟರಾಜ್‌ರವರು ಸೂಚಿಸಿದರು. ಸದಸ್ಯರಾದ ಶ್ರೀ ಅರ್ ಎಸ್ ಪಾಟೀಲ ಅನುಮೋದಿಸಿದರು. ಅಧ್ಯಕ್ಷ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಬೇರೆಯವರ ಹೆಸರು ಸೂಚನೆ ಆಗದೇ ಇರುವ ಹಿನ್ನೆಲೆಯಲ್ಲಿ ಶ್ರೀ ಎಸ್.ವಿ. ಸಂಕನೂರ ರವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಗೊಂಡರು.

7. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನಿಯಮಾವಳಿಗಳ ಅನ್ವಯ ಎರಡು ಉಪಾಧ್ಯಕ್ಷ ಸ್ಥಾನಗಳಿದ್ದು, ಅದರಲ್ಲಿ ಮೊದಲನೇ ಉಪಾಧ್ಯಕ್ಷ ಸ್ಥಾನಕ್ಕಾಗಿ ಶ್ರೀ ಹುಲಿಕಲ್ ನಟರಾಜ್ ಇವರ ಹೆಸರನ್ನು ಸದಸ್ಯರಾದ ಶ್ರೀ ಹೆಚ್.ಜಿ. ಹುದ್ದಾರ್ ಸೂಚಿಸಿದರು. ಶ್ರೀ ಉದಯ ರತ್ನಕುಮಾರ್ ಅನುಮೋದಿಸಿದರು. ಮೊದಲನೇ ಉಪಾಧ್ಯಕ್ಷ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಸೂಚನೆ ಬಾರದೇ ಇರುವ ಹಿನ್ನೆಲೆಯಲ್ಲಿ ಶ್ರೀ ಹುಲಿಕಲ್ ನಟರಾಜ್ ರವರು ಅವಿರೋಧವಾಗಿ ಮೊದಲನೇ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

8. ಇನ್ನೋರ್ವ ಉಪಾಧ್ಯಕ್ಷ ಸ್ಥಾನಕ್ಕಾಗಿ ಪ್ರೊ॥ ಗುರುನಂಜಯ್ಯನವರ ಹೆಸರನ್ನು ಸದಸ್ಯರಾದ ಶ್ರೀ ಬಿ. ದೊಡ್ಡಬಸಪ್ಪ ಸೂಚಿಸಿದರು. ಶ್ರೀ ಬಿ.ಎನ್. ಶ್ರೀನಾಥ್ ಅನುಮೋದಿಸಿದರು. ಎರಡನೇ ಉಪಾಧ್ಯಕ್ಷ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಸೂಚನೆ ಬಾರದೇ ಇರುವ ಹಿನ್ನೆಲೆಯಲ್ಲಿ ಪ್ರೊ॥ ಗುರುನಂಜಯ್ಯನವರು ಅವಿರೋಧವಾಗಿ ಎರಡನೇ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

9. ಗೌರವ ಕಾರ್ಯದರ್ಶಿ ಸ್ಥಾನಕ್ಕಾಗಿ ಶ್ರೀ ಗಿರೀಶ್ ಬಿ. ಕಡ್ಲೇವಾಡರವರ ಹೆಸರನ್ನು ಸದಸ್ಯರಾದ ಶ್ರೀ ಆರ್.ಎಸ್. ಎಲಿ ಸೂಚಿಸಿದರು. ಡಾ. ಕುಂಟೆಪ್ಪ ಗೌರೀಪುರ ಅನುಮೋದಿಸಿದರು. ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಸೂಚನೆ ಬಾರದೇ ಇರುವ ಹಿನ್ನೆಲೆಯಲ್ಲಿ ಶ್ರೀ ಗಿರೀಶ್ ಬಿ. ಕಡ್ಲೇವಾಡ ರವರು ಅವಿರೋಧವಾಗಿ ಗೌರವ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

10. ಜಂಟಿ ಕಾರ್ಯರ್ಶಿ ಸ್ಥಾನಕ್ಕಾಗಿ ಶ್ರೀ ಬಿ.ಎನ್. ಶ್ರೀನಾಥ್ ರವರ ಹೆಸರನ್ನು ಸದಸ್ಯರಾದ ಶ್ರೀ ಜಗನ್ನಾಥ್ ಹಲಮಡಗಿ ಸೂಚಿಸಿದರು. ಶ್ರೀ ಶಂಕರ್ ತಮ್ಮಣ್ಣ ನಾಯಿಕ ಅನುಮೋದಿಸಿದರು. ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಸೂಚನೆ ಬಾರದೇ ಇರುವ ಹಿನ್ನೆಲೆಯಲ್ಲಿ ಶ್ರೀ ಬಿ.ಎನ್. ಶ್ರೀನಾಥ್‌ರವರು ಅವಿರೋಧವಾಗಿ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

11. ಖಜಾಂಚಿ ಸ್ಥಾನಕ್ಕೆ ಶ್ರೀ ನರೇಂದ್ರ ಆಡನೂರು ಇವರ ಹೆಸರನ್ನು ಸದಸ್ಯರಾದ ಶ್ರೀ ಸಿ. ಕೃಷ್ಣೇಗೌಡ ರವರು ಸೂಚಿಸಿದರು. ಶ್ರೀ ದಾನಿ ಬಾಬುರಾವ್ ಅನುಮೋದಿಸಿದರು. ಖಜಾಂಚಿ ಸ್ಥಾನಕ್ಕೆ ಇನ್ನಾವುದೇ ಸದಸ್ಯರಿಂದ ಸೂಚನೆ ಬಾರದೇ ಇರುವ ಹಿನ್ನೆಲೆಯಲ್ಲಿ ಶ್ರೀ ನರೇಂದ್ರ ಆಡನೂರು ಇವರು ಅವಿರೋಧವಾಗಿ ಖಜಾಂಚಿಯಾಗಿ ಆಯ್ಕೆಗೊಂಡರು.

**ಅಧ್ಯಕ್ಷರ ನುಡಿ :**

ಪದಾಧಿಕಾರಿಗಳ ಆಯ್ಕೆಯ ನಂತರ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಎಸ್.ವಿ. ಸಂಕನೂರ ರವರು ಆಯ್ಕೆಗೊಂಡ ಸದಸ್ಯರೆಲ್ಲರಿಗೂ ಅಭಿನಂದಿಸಿದರು ಮತ್ತು ಪದಾಧಿಕಾರಿಗಳ ಆಯ್ಕೆಯು ಅವಿರೋಧವಾಗಿ ಸರ್ವಾನುಮತದಿಂದ ನಡೆದಿರುವುದನ್ನು ಶ್ಲಾಘಿಸಿದರು. ಮುಂಬರುವ ದಿನಗಳಲ್ಲಿ ವಿಜ್ಞಾನ ಪರಿಷತ್ತಿನ ಕನಸಿನ ಯೋಜನೆಗಳಾದ ಡಾ॥ ಎಚ್. ನರಸಿಂಹಯ್ಯ ಸೃಜನಾತ್ಮಕ ವಿಜ್ಞಾನ ಅಧ್ಯಯನ ಕೇಂದ್ರದ ಸ್ಥಾಪನೆ, ಗ್ರಾಮೀಣ ವಿಜ್ಞಾನ ಕೇಂದ್ರಗಳ, ಶಾಲಾ ವಿಜ್ಞಾನ ಘಟಕಗಳ ಪುನರುಜ್ಜೀವನಗೊಳಿಸುವಿಕೆ, ತಾಲ್ಲೂಕು ಮಟ್ಟದಲ್ಲಿ ವಿಜ್ಞಾನ ಪರಿಷತ್ತಿನ ಸಮಿತಿಗಳ ರಚನೆ, ವಿಜ್ಞಾನ ಪರಿಷತ್ತಿನ ಪ್ರಕಟಣೆಗಳ ಸುವ್ಯವಸ್ಥಿತ ಮಾರಾಟ ಮಳಿಗೆಯ ಸ್ಥಾಪನೆ ಸೇರಿದಂತೆ ಹಲವಾರು ಯೋಜನೆಗಳನ್ನು ಪೂರ್ಣಗೊಳಿಸುವ ಉದ್ದೇಶವನ್ನು ವ್ಯಕ್ತಪಡಿಸಿದರು. ಅದರಂತೆ ಪ್ರಸ್ತುತ ಚುನಾವಣಾ ವಿಧಾನದಲ್ಲಿ ಹಲವಾರು ಲೋಪ-ದೋಷಗಳನ್ನು ಗುರುತಿಸಲಾಗಿದ್ದು, ಈಗಾಗಲೇ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ, ಸದಸ್ಯರೆಲ್ಲರ ಸಹಕಾರದೊಂದಿಗೆ ಚುನಾವಣಾ ಪ್ರಕ್ರಿಯೆಯ ಪರಿಷ್ಕರಣೆಗಾಗಿ ವಿಜ್ಞಾನ ಪರಿಷತ್ತಿನ ನಿಯಮಾವಳಿಗಳಲ್ಲಿ ಸೂಕ್ತ ತಿದ್ದುಪಡಿಯನ್ನೂ ಸಹ ಮಾಡುವ ಅಗತ್ಯತೆಯನ್ನು ಪ್ರಸ್ತಾಪಿಸಿದರು. ಇದಲ್ಲದೆ, ಜಿಲ್ಲಾ ಘಟಕ, ತಾಲ್ಲೂಕು ಘಟಕಗಳ ರಚನೆ 2 ತಿಂಗಳೊಳಗಾಗಿ ಪೂರ್ಣಗೊಳಿಸಬೇಕಾಗಿದ್ದು, ಎಲ್ಲ ಕಾರ್ಯಕಾರಿ ಮಂಡಳಿಯ ಸದಸ್ಯರು ಸಹಕರಿಸಲು ಮನವಿ ಮಾಡಿಕೊಂಡರು. ಅದೇ ರೀತಿ ಕರಾವಿಪಕ್ಕೆ ನೂತನವಾಗಿ ಆಯ್ಕೆಯಾದ ಉಪಾಧ್ಯಕ್ಷರು, ಕಾರ್ಯದರ್ಶಿ, ಸಹಕಾರ್ಯದರ್ಶಿ ಹಾಗೂ ಖಜಾಂಚಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ನೂತನ ಪದಾಧಿಕಾರಿಗಳ ಆಯ್ಕೆಯ ನಂತರ ವಿವಿಧ ಉಪಸಮಿತಿಗಳಿಗೆ ಛೇರ್‌ಮನ್ ಹಾಗೂ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆಗೊಳಿಸಲಾಯಿತು. ಅದರ ವಿವರಗಳು ಈ ಕೆಳಗಿನಂತಿವೆ ;

1. **ಬಾಲವಿಜ್ಞಾನ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿ** ಹಿರಿಯ ಸದಸ್ಯರಾದ ಶ್ರೀಮತಿ ಶ್ರೀಮತಿ ಹರಿಪ್ರಸಾದ್ ಆಯ್ಕೆಗೊಂಡರು. ಅದರಂತೆ, ಉಪಸಂಪಾದಕರಾಗಿ ಶ್ರೀ ಆರ್.ಎಸ್. ಪಾಟೀಲ, ಸಂಪಾದಕ ಮಂಡಳಿಯ ಸದಸ್ಯರಾಗಿ ಡಾ. ವ್ಹಿ.ಎನ್. ನಾಯಕ್, ಡಾ. ವೈ.ಸಿ. ಕಮಲ, ಶ್ರೀ ವೈ.ಬಿ. ಗುರಣ್ಣವರ ಹಾಗೂ ಶ್ರೀ ನಾರಾಯಣ ಬಾಬಾನಗರ ಇವರುಗಳು ಆಯ್ಕೆಗೊಂಡರು.

2. **ಪುಸ್ತಕ ಪ್ರಕಟಣಾ ಸಮಿತಿಯ ಛೇರ್‌ಮನ್‌ರಾಗಿ** ಶ್ರೀ ಕೊಟ್ರುಸ್ವಾಮಿಯವರನ್ನು ಹಾಗೂ ಸದಸ್ಯರಾಗಿ ಶ್ರೀ ಮಂಜುನಾಥ್ ಎನ್.ಆರ್., ಶ್ರೀ ಸುಭಾಶ್ ನೇಳಗೆ ಹಾಗೂ ಶ್ರೀ ವಿ.ಎಸ್.ಎಸ್. ಶಾಸ್ತ್ರಿ ಆಯ್ಕೆಗೊಂಡರು.

3. **ಮಾನವ ಸಂಪನ್ಮೂಲ ಸಮಿತಿಯ ಛೇರ್‌ಮನ್** ಡಾ. ಆರ್.ಎಸ್. ಎಲಿ ಹಾಗೂ ಸದಸ್ಯರಾಗಿ ಶ್ರೀ ಎಂ.ಟಿ. ಶಂಕರಪ್ಪ ಆಯ್ಕೆಗೊಂಡರು.

4. **ಆರ್ಥಿಕ ಸಮಿತಿಗೆ** ಪರಿಷತ್ತಿನ ಪದಾಧಿಕಾರಿಗಳಾದ ಶ್ರೀ ಎಸ್.ವಿ. ಸಂಕನೂರ, ಶ್ರೀ ಹುಲಿಕಲ್ ನಟರಾಜ್, ಪ್ರೊ॥ ಗುರುನಂಜಯ್ಯ, ಶ್ರೀ ಗಿರೀಶ್ ಬಿ. ಕಡೇವಾಡ, ಶ್ರೀ ಬಿ.ಎನ್. ಶ್ರೀನಾಥ್, ಶ್ರೀ ನರೇಂದ್ರ ಆಡನೂರು ಸೇರಿದಂತೆ ಶ್ರೀ ದಾನಿ ಬಾಬುರಾವ್ ಇವರುಗಳು ಸದಸ್ಯರಾಗಿ ಆಯ್ಕೆಗೊಂಡರು.

5. **ಜನವಿಜ್ಞಾನ ಚಳುವಳಿ** ಸಮಿತಿಗೆ ಛೇರ್‌ಮನ್‌ರಾಗಿ ಶ್ರೀ ಈ. ಬಸವರಾಜು, ಸದಸ್ಯರಾಗಿ ಶ್ರೀ ಸೂರ್ಯಪ್ರಕಾಶ್ ಘನಾತೆ, ಶ್ರೀ ರಾಮಚಂದ್ರ, ಶ್ರೀ ಶಂಕರ ತಮ್ಮಣ್ಣ ನಾಯಿಕ ಹಾಗೂ ಶ್ರೀ ಗುರುಸಿದ್ಧಸ್ವಾಮಿ ಆಯ್ಕೆಗೊಂಡರು.

6. **ಆರೋಗ್ಯ ಸಮಿತಿಯ** ಛೇರ್‌ಮನ್‌ರಾಗಿ ಶ್ರೀ ಕೌಶಿಕ್ ಆಯ್ಕೆಗೊಂಡರು. ಆರೋಗ್ಯ ಸಮಿತಿಯ ಸದಸ್ಯರ ಸ್ಥಾನಕ್ಕಾಗಿ ಸೂಕ್ತ ಮಹನೀಯರನ್ನು ಗುರುತಿಸಿ ತಿಳಿಸಿದಲ್ಲಿ ಅವರನ್ನೂ ಸಮಿತಿಗೆ ಸೇರ್ಪಡೆಗೊಳಿಸಲಾಗುವುದೆಂದು ಅಧ್ಯಕ್ಷರು ಸೂಚಿಸಿದರು.

ವಿಜ್ಞಾನ ಪರಿಷತ್ತಿನಲ್ಲಿ ಜಾರಿಯಲ್ಲಿರುವ ಕೆಲವು ಮುಖ್ಯ ಕಾರ್ಯಕ್ರಮಗಳ ರಾಜ್ಯ ಸಂಯೋಜಕರಾಗಿ ಉಪಸ್ಥಿತರಿದ್ದ ಸದಸ್ಯರಲ್ಲಿ ಈ ಕೆಳಗಿನ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆಗೊಳಿಸಲಾಯಿತು.

| | | | |
|---|---|---|---|
| **1.** | **ಪರಿಸರ ಜಾಗೃತಿ ಕಾರ್ಯಕ್ರಮಗಳು** | – | ಶ್ರೀ ಎಂ.ಟಿ. ಶಂಕರಪ್ಪ |
| **2.** | **ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ** | – | ಶ್ರೀ ಪಂಡಿತ್ ಕೆ. ಬಾಳೂರೆ ಹಾಗೂ ಶ್ರೀ ಹೆಚ್.ಜಿ. ಹುದ್ದಾರ್ ಮುಂದಿನ ಶೈಕ್ಷಣಿಕ ವರ್ಷಕ್ಕಾಗಿ ಶ್ರೀ ಹೆಚ್.ಜಿ. ಹುದ್ದಾರ್ ಹಾಗೂ ಶ್ರೀ ಸಿ. ಕೃಷ್ಣೇಗೌಡ |
| **3.** | **ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ** | – | ಶ್ರೀ ಆರ್.ಎಸ್. ಪಾಟೀಲ ಹಾಗೂ ಶ್ರೀ ಬಿ. ದೊಡ್ಡಬಸಪ್ಪ |
| **4.** | **ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ** | – | ಡಾ. ಕುಂಟೆಪ್ಪ ಗೌರೀಪುರ |
| **5.** | **ಅಂತರ ಕಾಲೇಜು ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆ** | – | ಶ್ರೀ ಜಗನ್ನಾಥ್ ಹಲಮಡಗಿ |
| **6.** | **ಉದಯೋನ್ಮುಖ ವಿಜ್ಞಾನ ಬರಹಗಾರರಿಗೆ ಕಮ್ಮಟ** | – | ಶ್ರೀ ದಾನಿ ಬಾಬು ರಾವ್ |
| 7. | **ಸಾಮಾಜಿಕ ಮೌಢ್ಯಗಳ ನಿವಾರಣೆ, ವಿಜ್ಞಾನ ಜಾಗೃತಿ, ಪರಿಶಿಷ್ಠ ಜಾತಿ, ಪಂಗಡಗಳ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಕಾರ್ಯಕ್ರಮಗಳು** | – | ಶ್ರೀ ಹುಲಿಕಲ್ ನಟರಾಜ್ |

ಸದಸ್ಯರ ಅಪೇಕ್ಷೆಯಂತೆ ವಿಜ್ಞಾನ ಪರಿಷತ್ತಿನ ಸಿಬ್ಬಂದಿ ಸದಸ್ಯರೆಲ್ಲರನ್ನು ಸಭೆಗೆ ಪರಿಚಯಿಸಲಾಯಿತು. ಕೊನೆಯಲ್ಲಿ ಜಂಟಿ ಕಾರ್ಯದರ್ಶಿ ಶ್ರೀ ಬಿ.ಎನ್. ಶ್ರೀನಾಥ್ ರವರು ಸಭೆಗೆ ಆಗಮಿಸಿ ಕಾರ್ಯಸೂಚಿಯಂತೆ ಸಭೆ ನಡೆಸಲು ಸಹಕರಿಸಿದ ಎಲ್ಲ ಸದಸ್ಯರಿಗೆ ವಂದಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಗಿರೀಶ್ ಬಿ. ಕಡ್ಲೇವಾಡ
ಗೌರವ ಕಾರ್ಯದರ್ಶಿ

ಎಸ್.ವಿ. ಸಂಕನೂರ
ಅಧ್ಯಕ್ಷರು

***********